# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1299 (1338)**
**ಸದಸ್ಯರ ಹೆಸರು : ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭಾ ಕ್ಷೇತ್ರ)**
**ಉತ್ತರಿಸುವ ದಿನಾಂಕ : 18.12.2025**
**ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು**

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ಪೀರಾಪೂರ-ಬೂದಿಹಾಳ ಏತ ನೀರಾವರಿ ಹಂತ-2ರ ಕಾಮಗಾರಿಗಾಗಿ ನಿಗದಿಗೊಳಿಸಲಾದ ಅನುದಾನ ಎಷ್ಟು; ಈ ಕಾಮಗಾರಿ ಪ್ರಸ್ತುತ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸದರಿ ಯೋಜನೆಗಾಗಿ ನಿಗದಿಯಾದ ಅನುದಾನ ಬಿಡುಗಡೆ ಮಾಡಲಾಗಿದೆಯೇ; ಹಾಗೂ ಯಾವ ಕಾರಣಕ್ಕಾಗಿ ಕಾಮಗಾರಿ ಸ್ಥಗಿತಗೊಂಡಿದೆ: (ಮಾಹಿತಿ ನೀಡುವುದು); | ಬೂದಿಹಾಳ-ಪೀರಾಪೂರ ಏತ ನೀರಾವರಿ ವಿಸ್ತರಣೆ ಯೋಜನೆಯಿಂದ ಸುರಪುರ ವಿಧಾನಸಭಾ ಕ್ಷೇತ್ರದಡಿ 43,978 ಎಕರೆ (17805 ಹೆಕ್ಟೇರ್) ಜಮೀನಿಗೆ ನೀರಾವರಿ ಸೌಲಭ್ಯ ಒದಗಿಸುವ ರೂ.549.70 ಕೋಟಿಗಳ ಅಂದಾಜು ಮೊತ್ತಕ್ಕೆ ಸರ್ಕಾರದ ಆದೇಶ ದಿನಾಂಕ:19.11.2020ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.<br><br>ಸದರಿ ಯೋಜನೆಯಡಿಯ ಮುಖ್ಯ ಸ್ಥಾವರ ಹಾಗೂ ಪೈಪ್ಡ್ ವಿತರಣಾ ಕಾಲುವೆ ಜಾಲ ಕಾಮಗಾರಿಯನ್ನು ರೂ.769.34 ಕೋಟಿ ಮೊತ್ತಕ್ಕೆ ಗುತ್ತಿಗೆ ವಹಿಸಲಾಗಿದ್ದು, ಇದುವರೆಗೆ ರೂ.632.00 ಕೋಟಿಗಳ ವೆಚ್ಚವನ್ನು ಭರಿಸಲಾಗಿರುತ್ತದೆ.<br><br>ಪ್ರಸ್ತುತ ಕಾಮಗಾರಿಯು ಬಹುತೇಕ ಭೌತಿಕವಾಗಿ ಪೂರ್ಣಗೊಂಡಿದ್ದು, ನಿಗಧಿತ ಅಚ್ಚುಕಟ್ಟು 17,805 ಹೆಕ್ಟರ್ ಗಳಿಗೆ 853 ಔಟಲೇಟ್ ಪೈಕಿ 800 ಔಟ್‌ಲೆಟ್‌ಗಳನ್ನು ಅಳವಡಿಸಲಾಗಿದೆ ಹಾಗೂ ಸುಮಾರು 250 ಔಟಲೇಟ್‌ಗಳಿಗೆ ಪ್ರಾಯೋಗಿಕವಾಗಿ ನೀರು ಹರಿಸಲಾಗಿದೆ. ಉಳಿದ ಕಾಮಗಾರಿಯನ್ನು ಕೂಡಲೇ ಪೂರ್ಣಗೊಳಿಸಲು ಕ್ರಮ ವಹಿಸಲಾಗುತ್ತಿದೆ. |
| (ಆ) | ಸದರಿ ಯೋಜನೆಯಡಿಯಲ್ಲಿ ಯಾವ ಯಾವ ವಿಧಾನ ಸಭಾಕ್ಷೇತ್ರ ವ್ಯಾಪ್ತಿಯ ಎಷ್ಟು ಎಕರೆ ಜಮೀನು ನೀರಾವರಿಗೊಳ ಪಡಲಿದೆ; ಹಾಗೂ ರೈತರ ಜಮೀನುಗಳಿಗೆ ಯಾವ ಕಾಲಮಿತಿಯಲ್ಲಿ ನೀರು ಒದಗಿಸಲಾಗುವುದು; (ಮಾಹಿತಿ ನೀಡುವುದು) | |
| (ಇ) | ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲೂಕಿನ ಮಲ್ಲಾಬಾದ ಏತ ನೀರಾವರಿ ಯೋಜನೆ ಪ್ರಸ್ತುತ ಯಾವ ಹಂತದಲ್ಲಿದೆ ಹಾಗೂ ಈ ಯೋಜನೆಯನ್ನು ಯಾವಾಗ ಪೂರ್ಣಗೊಳಿಸಲಾಗುತ್ತದೆ? | ಮಲ್ಲಾಬಾದ ಏತ ನೀರಾವರಿ ಯೋಜನೆಯ ಲಿಫ್ಟ್-1, 2 & 3ರ ಮುಖ್ಯ ಕಾಲುವೆ ಕಾಮಗಾರಿ ಪೂರ್ಣಗೊಳಿಸಿ ಕಾಲುವೆಗಳಲ್ಲಿ ಪ್ರಾಯೋಗಿಕವಾಗಿ ನೀರು ಹರಿಸಲಾಗಿದೆ. ಮುಂದುವರೆದು, ಮುಖ್ಯ ಕಾಲುವೆಗಳಡಿ ಬರುವ ಸುಮಾರು 7,014 ಹೆಕ್ಟರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವ ವಿತರಣಾ ಕಾಲುವೆ ಮತ್ತು ಲ್ಯಾಟರಲ್ ಕಾಲುವೆ ನಿರ್ಮಾಣದ ಪ್ಯಾಕೇಜ್ ಕಾಮಗಾರಿಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತವೆ.<br><br>ಸದರಿ ಯೋಜನೆಯಡಿ ಬರುವ ಬಾಕಿ ಉಳಿದಿರುವ 26,716 ಹೆಕ್ಟೇರ್ ಅಚ್ಚುಕಟ್ಟು ಕ್ಷೇತ್ರದ ನೀರಾವರಿ ಸೌಲಭ್ಯ ಕಲ್ಪಿಸುವ ಡಿಸ್ಟ್ರಿಬ್ಯೂಟರ್ ಮತ್ತು ಲ್ಯಾಟರಲ್‌ಗಳ 03 ಪ್ಯಾಕೇಜ್ ಕಾಮಗಾರಿಗಳಿಗೆ ಟೆಂಡರ್ ಕರೆದು ಆರ್ಥಿಕ ಬಿಡ್ ತೆರೆಯಲಾಗಿದ್ದು, ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದ ನಂತರ ಗುತ್ತಿಗೆ ವಹಿಸಲು ಕ್ರಮ ಜರುಗಿಲಾಗುವುದು. |

ಸಂಖ್ಯೆ:ಜಸಂಇ 106 ಡಬ್ಲ್ಯೂಬಿಎಂ 2025

**(ಡಿ.ಕೆ. ಶಿವಕುಮಾರ್)**
**ಉಪ ಮುಖ್ಯಮಂತ್ರಿಗಳು**